ಉಲ್ಲೇಖ: ಡಿಬಿಒಡಿ.ಸಂಖ್ಯೆ.ಕಾಮ್.ಬಿಸಿ. 18/ಸಿ.408ಎ–78

15ನೇ ಫೆಬ್ರವರಿ 1978

ಎಲ್ಲ ವಾಣಿಜ್ಯ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ,

ಮಾನ್ಯರೇ,

**ಬ್ಯಾಂಕುಗಳಲ್ಲಿ ವಂಚನೆಗಳು**

ಒಬ್ಬ ವ್ಯಕ್ತಿಯು ಕೆಲವು ಮುಖ್ಯ ಬದಲಾವಣೆಗಳನ್ನು ಮಾಡಿ ಅಂದರೆ, ಹಣ ಪಡೆಯುವವನ ಹೆಸರನ್ನು ಬದಲಾಯಿಸಿ ಮತ್ತು ಒಂದು ಬ್ಯಾಂಕಿನ (ಹಣ ಪಾವತಿಸುವ ಬ್ಯಾಂಕು) ಚೆಕ್‌ನ ಮೊಬಲಗನ್ನು ಮತ್ತು ದಿನಾಂಕವನ್ನು ತಿದ್ದಿ ವಂಚಿಸಿದ್ದಾನೆಂಬ ಮೂರನೇ ಬ್ಯಾಂಕಿನಲ್ಲಿನ (ಸಂಗ್ರಹಿಸುವ ಬ್ಯಾಂಕು) ತನ್ನ ಖಾತೆಗೆ ಜಮೆಯಾಗುವಂತೆ ಮಾಡಿ ತರುವಾಯ ಆ ಹಣವನ್ನು ತೆಗೆದಿದ್ದಾನೆ ಎಂದು ನಮ್ಮ ಗಮನಕ್ಕೆ ಬಂದಿದೆ. ಹಣ ಕಳೆದುಕೊಂಡ ಖಾತೆದಾರನು ಈ ವಿಷಯವನ್ನು ನ್ಯಾಯಾಲಯಕ್ಕೆ ಒಯ್ದಿದ್ದು, ನ್ಯಾಯಾಲಯವು ಸಂಗ್ರಹಿಸುವ ಬ್ಯಾಂಕು ಮತ್ತು ಹಣ ಪಾವತಿಸುವ ಬ್ಯಾಂಕು ಈ ಎರಡೂ ಬ್ಯಾಂಕುಗಳು ಪೂರ್ಣ ನಿರ್ಲಕ್ಷ್ಯ ವಹಿಸಿವೆ ಎಂದು ಅಭಿಪ್ರಾಯ ಪಟ್ಟಿದೆ. ಯಾವುದೇ ಘಟ್ಟದಲ್ಲಿ ಬಗ್ಗೆ ತನ್ನ ಸಿಬ್ಬಂದಿ ಅಕ್ರಮ/ ವಂಚನೆ ಎಸಗಿದ್ದಾರೆಂದು ಬ್ಯಾಂಕಿಗೆ ಒಮ್ಮೆ ಮನವರಿಕೆಯಾಯಿತೆಂದರೆ, ಅದು ಕೂಡಲೇ, ತಮ್ಮ ಬಾಧ್ಯತೆಯನ್ನು ಒಪ್ಪಿಕೊಂಡು ನ್ಯಾಯ ಸಮ್ಮತವಾದ ಕ್ಷೇಮವನ್ನು ಪುರಸ್ಕರಿಸಿ ಹಣ ಸಂದಾಯ ಮಾಡುವ ಮೂಲಕ ಜನ ಸಾಮಾನ್ಯರೊಂದಿಗೆ ನ್ಯಾಯ ಸಮ್ಮತವಾಗಿ ವ್ಯವಹರಿಸುವುದಕ್ಕೆ ಮಾದರಿಯಾಗಬೇಕೇ ಹೊರತು ಅನಗತ್ಯ ವ್ಯಾಜ್ಯಗಳಿಗೆ ಮುಂದಾಗಬಾರದು ಎಂದು ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ. ಉಚ್ಚ ನ್ಯಾಯಾಲಯದ ಈ ಅಭಿಪ್ರಾಯೋಕ್ತಿಗಳನ್ನು ಅನುಷ್ಠಾನಗೊಳಿಸುವಂತೆ ಬ್ಯಾಂಕುಗಳಿಗೆ ನಾವು ಆದೇಶಿಸುತ್ತೇವೆ.

ತಮ್ಮ ವಿಶ್ವಾಸಿ,
ಸಹಿ/–
(ಪಿ.ಕೆ. ವೆಂಕಟೇಶ್ವರನ್)
ಜಂಟಿ ಮುಖ್ಯಾಧಿಕಾರಿ.